ಸಂ/ಜಿಸಕಅ/ಡಿ3/ಸಿಬ್ಬಂದಿ/ಸಿಆರ್36/16-17

ಉಪನಿರ್ದೇಶಕರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ, ಹಾಸನ. ದಿ:11-8-2017.

## ಸೂಚನಾ ಪತ್ರ

ವಿಷಯ:- ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್ 'ಡಿ' ವೃಂದದ ಕಾವಲುಗಾರರ ಹುದ್ದೆಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಪ್ರಕಟಿಸಲಾದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಬಗ್ಗೆ.

ಉಲ್ಲೇಖ:1)ಸರ್ಕಾರಿ ಆದೇಶದ ಸಂಖ್ಯೆ:ಸಕಇ 268 ಪಕಸೇ 2016 ದಿ:29-9-2016.
2)ಜಿಲ್ಲಾಧಿಕಾರಿಗಳು, ಹಾಸನ ರವರ ಇದೇ ಸಮಸಂಖ್ಯೆ ಅಧಿಸೂಚನೆ ದಿ:20-10-16.
3)ದಿ:3-8-2017 ರಂದು ಜಿಲ್ಲಾಧಿಕಾರಿಗಳು, ಹಾಸನ ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ 'ಡಿ' ವೃಂದದ ನೇಮಕಾತಿ ಪ್ರಾಧಿಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

***********

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2)ರ ಆದೇಶದಂತೆ ಹಾಸನ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಕಾವಲುಗಾರರ ಹುದ್ದೆಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖ (1)ರ ಆದೇಶದಂತೆ ದಿನಾಂಕ:6-7-2017 ರಂದು ಕಾವಲುಗಾರರ ದೈಹಿಕ ದಾರ್ಢ್ಯತೆ ಪರೀಕ್ಷೆಗೆ ಹಾಜರಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಎಸ್.ಎಸ್.ಎಲ್.ಸಿ. ಅಂಕಗಳ ಜೇಷ್ಠತೆ ಮತ್ತು ಮೀಸಲಾತಿವಾರು ತಯಾರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹಾಸನ ಜಿಲ್ಲಾ ವೆಬ್‌ಸೈಟ್ http://hassan.nic.inರಲ್ಲಿ ದಿನಾಂಕ 12-7-2017ರಲ್ಲಿ ಪ್ರಕಟಿಸಲಾಗಿರುತ್ತದೆ. ತಾತ್ಕಾಲಿಕ ಆಯ್ಕೆ ಪಟ್ಟಿಗೆ ನಿಗದಿತ ದಿನಾಂಕದೊಳಗೆ ಬಂದಿದ್ದ ಆಕ್ಷೇಪಣೆಗಳ ಬಗ್ಗೆ ದಿ:3-8-2017 ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ದೈಹಿಕ ದಾರ್ಢ್ಯತೆ ಪರೀಕ್ಷೆಯ ಎಲ್ಲಾ ವಿಭಾಗಗಳಲ್ಲಿ ಉತ್ತೀರ್ಣರಾಗಿ ಎದೆ ಉಬ್ಬಿಸುವಿಕೆಯಲ್ಲಿ ಆಯ್ಕೆಯಾಗದಿದ್ದ 10 ಅಭ್ಯರ್ಥಿಗಳಿಗೆ ಮತ್ತು ಕಡಿಮೆ ಅಂತರದ ತೂಕದಿಂದ ಆಯ್ಕೆಯಾಗದಿದ್ದ ಒಬ್ಬ ಮಹಿಳಾ ಅಭ್ಯರ್ಥಿಗೆ ಮತ್ತೊಮ್ಮೆ ಅಳತೆ ಮಾಡಲು ತೀರ್ಮಾನಿಸಿದಂತೆ ದಿ:11-8-2017 ರಂದು ಪುರುಷ ಅಭ್ಯರ್ಥಿಗಳಿಗೆ ಎದೆ ಸುತ್ತಳತೆ ಮತ್ತು ಒಬ್ಬರು ಮಹಿಳಾ ಅಭ್ಯರ್ಥಿಗೆ ತೂಕದ ಅಳತೆ ಮಾಡಿ ದೈಹಿಕ ದಾರ್ಢ್ಯತೆ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಪರಿಗಣಿಸಿ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು http://hassan.nic.inರಲ್ಲಿ ಪ್ರಕಟಿಸಲಾಗಿರುತ್ತದೆ.

ಈ ತಾತ್ಕಾಲಿಕ ಅಯ್ಕೆ ಪಟ್ಟಿಗೆ ಅಭ್ಯರ್ಥಿಗಳಿಂದ ಏನಾದರೂ ಆಕ್ಷೇಪಣೆ ಇದ್ದಲ್ಲಿ ಲಿಖಿತವಾಗಿ ಪೂರಕ ದೃಢೀಕೃತ ದಾಖಲೆಗಳೊಂದಿಗೆ ದಿ:18-8-2017 ರೊಳಗೆ ಕಛೇರಿ ಸಮಯದಲ್ಲಿ ತಲುಪುವಂತೆ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಹಾಗೂ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ ಇವರಿಗೆ ಅಂಚೆ/ಮುದ್ದಾಂ ಮೂಲಕ ಸಲ್ಲಿಸಲು ತಿಳಿಸಿದೆ. ನಿಗದಿತ ದಿನಾಂಕದ ನಂತರ ಬಂದ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಗ್ರೂಪ್-ಡಿ ನೇಮಕಾತಿ
ಪ್ರಾಧಿಕಾರಿ ಹಾಗೂ ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ, ಹಾಸನ